ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 24.10.2024.
**ಮುಂದುವರದೆ ವಾಟೀ ಸವಾಲುಃ** ಅರ್ಜಿದಾರ ಪರ ಶ್ರೀ ಪಿ.ಎನ್.ಎಸ್. ವಕೀಲರಿಂದಃ

ಭೀಮರಾವ್ ರವರು ಜೈಲಿನಿಂದ ದಿಃ 21.12.2013 ರಂದು ಬಿಡುಗಡೆಯಾಗಿರುತ್ತಾರೆ ಹಾಗೂ ಕ್ರಯ ಪತ್ರವನ್ನು ದಿಃ 07.08.2012 ರಂದು ಆಗಿರುತ್ತದೆ ಎಂದರೆ ಸರಿ. ಅರ್ಜಿದಾರಳು ಅಸಲು ದಾವೆಯನ್ನು 2010ರಂದು ಹಾಕಿದ್ದಳು ಮತ್ತು ಆ ದಾವೆಯಲ್ಲಿ ಭೀಮರಾವ್ ರವರು ತಮ್ಮ

ಪರವಾಗಿ ಆರ್.ಜೆ. ಪಾಟೀಲ್ ವಕೀಲರನ್ನು ನೇಮಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಭೀಮರಾವ್ ಮೇಲೆ ದಾವೆ ನಡೆದಿದ್ದು ಆತನಿಗೆ ಗೊತ್ತಿತ್ತು ಎಂದರೆ ಸರಿ. ಆತ ನನಗೆ ದಾವಾ ಚಾಲ್ತಿ ಇದ್ದ ಬಗ್ಗೆ ಹೇಳಿರುವುದಿಲ್ಲ. ಭೀಮರಾವ್ ರವರು ಜೈಲಿನಲ್ಲಿರುವ ಕಾರಣ ನನಗೆ ಸ್ವಂತವಾಗಿ ಕಬ್ಜಾ ಕೊಟ್ಟಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆತನ ಹೆಂಡತಿ ಮಕ್ಕಳು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ದೃಢೀಕೃತ ನಕಲಿನ ಕ್ರಯ ಪತ್ರವನ್ನು ತೋರಿಸಿದ್ದು, ಅದನ್ನು **ನಿಪಿ-10** ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-10ರಲ್ಲಿ ಮಾರಾಟಗಾರ ಖರೀದಿದಾರನಿಗೆ ಕಬ್ಜಾ ಕೊಟ್ಟಿರುತ್ತಾರೆ ಎಂದು ಬರೆಯಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಹಾಗೇ ಬರೆದಿದ್ದರೂ ಆತನ ಹೆಂಡತಿ ಮಕ್ಕಳು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ನಿಪಿ-10ರ ಕ್ರಯ ಪತ್ರವನ್ನು ನನ್ನ ಮಗ ವಿನಾಯಕ ಅಂದರೆ 5ನೇ ಎದುರುದಾರ ಕಲಬುರಗಿಯ ಸುನೀಲ್ ಗುದನಾಳ ವಕೀಲರ ಬಳಿ ಹೋಗಿ ತಯಾರಿಸಿರುತ್ತಾರೆ ಎಂದರೆ ಸರಿ. ಭೀಮರಾವ್ ರವರು ಮಾನಸಿಕವಾಗಿ ಅಸ್ವಸ್ತನ ಇರುವುದಿಲ್ಲ, ಆರೋಗ್ಯಕರವಾಗಿರುತ್ತಾನೆ. ಭೀಮರಾವ್ ರವರು ಮಾನಸಿಕವಾಗಿ ಅಸ್ವಸ್ತರು ಇರುತ್ತಾರೆ ಎಂದು ನ್ಯಾಯಾಲಯದ ಪಿ.ಎಸ್. ರವರು ನೋಟೀಸ್ ಜಾರಿ ಮಾಡುವ ಕಾಲಕ್ಕೆ ಹೋದಾಗ, ಆತನ 2ನೇ ಹೆಂಡತಿ ಮಲ್ಲಮ್ಮ ರವರು ಅವರಿಗೆ ತಲೆ ಸರಿ ಇಲ್ಲ ಎಂದು ವರದಿ ನೀಡಿರುತ್ತಾರೆ ಎಂದರೆ, ಸಾಕ್ಷಿ ಅದು ಸುಳ್ಳು ಇದೆ ಎಂದು ನುಡಿಯುತ್ತಾರೆ. ನಾನು ಭೀಮರಾವ್ ರವರನ್ನು ಸಾಕ್ಷಿ ನುಡಿಯಲು ಕರೆಯುತ್ತೇನೆ, ಆದರೆ ಅವರು ಬರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ಮಧ್ಯಂತರ ಅರ್ಜಿಯಲ್ಲಿ ವ್ಯವಹಾರ ಟಿ.ಪಿ. ಕಾಯ್ದೆ ಪ್ರಕಾರ ನಾವು ಮಾಡಿಕೊಂಡ ವ್ಯವಹಾರ hit by lis pendence ಆಗುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿ.

ನಾನು ಖರೀದಿ ಹಿಡಿದ ಸ್ವತ್ತಿನಲ್ಲಿ ನವದುರ್ಗೆ ದೇವಿಯ ಸ್ಥಾಪನೆ ಮಾಡಿರುತ್ತೇವೆ. ಸದರಿ

ದೇವಿಯ ಗುಡಿ ದಾವಾ ಸ್ವತ್ತಿನಲ್ಲಿ ಇರುತ್ತದೆ ಹಾಗೂ ದಾವಾ ಸ್ವತ್ತು ಊರಿಗೆ ಲಗತ್ ಆಗಿ ಇದೆ ಎಂದರೆ ಸರಿ. ಸರ್ವೆ ನಂ.151ನ್ನು ಬಿಟ್ಟು ಉಳಿದ ದಾವಾ ಸ್ವತ್ತುಗಳು ನಾವು ಖರೀದಿಸುವ ಕಾಲಕ್ಕೆ ಎಕರೆಗೆ ರೂ.30-40,000/- ಇದ್ದರು. ನಾವು ಖರೀದಿಸಿದ ಜಮೀನು ಊರಿಗೆ ಲಗತ್ ಆದ ಕಾರಣ ಅಡಿಗಳ ಲೆಕ್ಕದಲ್ಲಿ ಮಾರಾಟ ಆಗತ್ತೆ ಎಂದರೆ ನನಗೆ ಗೊತ್ತಿಲ್ಲ. ನಾವು ಖರೀದಿಸಿದ ಸ್ವತ್ತು 2012ರಲ್ಲಿ ಎಕರೆಗೆ ರೂ.50 ಲಕ್ಷಕ್ಕೆ ಮಾರಾಟವಾಗುತ್ತಿತ್ತು ಎಂದರೆ ಸರಿಯಲ್ಲ. ನಾವು ದಾವೆ ಚಾಲ್ತಿಯಲ್ಲಿ ಇರುವಾಗಲೇ ಖರೀದಿಸಿದ್ದರಿಂದ ಹಾಗೂ ವರ್ಗಾವಣೆ ಕಾಯ್ದೆ ಪ್ರಕಾರ ಕಾನೂನು ಬಾಹಿರವಾಗಿ ಖರೀದಿ ಮಾಡಿದ್ದರಿಂದ, ನಾವು ಮಾಡಿಕೊಂಡ ಕ್ತಯ ಪತ್ರ viod ಇರುತ್ತದೆ ಎಂದರೆ ಸರಿಯಲ್ಲ.

ನಾನು ಭೀಮರಾವ್ ಕಡೆಯಿಂದ ಮೋಸ ಮಾಡುವ ಉದ್ದೇಶದಿಂದ 3 ಎಕರೆ ಜಮೀನನ್ನು ರೂ.4 ಲಕ್ಷಕ್ಕೆ ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-10ರಲ್ಲಿಯ ಸಾಕ್ಷಿದಾರರು ಗಣ್ಯಮಾನ್ಯ ವ್ಯಕ್ತಿಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-10ರಲ್ಲಿಯ ಸಾಕ್ಷಿದಾರ ಸುನಿಲ್ ನನ್ನ ದೂರಿನ ಸಂಬಂಧಿಕ ಇರುತ್ತಾನೆ. ನನಗೆ ಬಾಬುರಾವ್ ತಂದೆ ಸಿದ್ದರಾಮಪ್ಪ ಮುಳಗೆ ರವರ ಪರಿಚಯ ಇರುತ್ತದೆ, ಅವರು ಭೀಮರಾವ್ ರವರ ಹೆಂಡತಿ ಅಣ್ಣ ಇರುತ್ತಾರೆ. ಭೀಮರಾವ್ ರವರನ್ನು ಜೈಲಿನಲ್ಲಿದ್ದಾಗ ಹಾಗೂ ಕ್ರಯ ಪತ್ರ ಬರೆದುಕೊಡುವ ಕಾಲಕ್ಕೆ ಅವರೇ ಭೀಮರಾವ್ ಇರುತ್ತಾರೆ ಎಂದು ಜೈಲರ್, ಅವರ ಹೆಂಡತಿ, ನನ್ನ ಮಗ ಮತ್ತು ಸುನಿಲ್ ರವರು ಗುರುತಿಸಿರುತ್ತಾರೆ. ನಿಪಿ-10ರಲ್ಲಿಯ ಸಾಕ್ಷಿದಾರರಾಗಿ ಸಹಿ ಮಾಡಿದ ರವೀಂದ್ರ ಯಾರು ಎಂದು ನನಗೆ ಗೊತ್ತಿಲ್ಲ, ಆದರೆ 5ನೇ ಎದುರುದಾರನಿಗೆ ಗೊತ್ತಿರಬಹುದು.

ಭೀಮರಾವ್ ರವರ ಮೇಲೆ ಇದೆ ಎಂದು ಹೇಳಲಾದ ಕೊಲೆ ಪ್ರಕರಣದ ಸಂಪೂರ್ಣ ಖರ್ಚು-ವೆಚ್ಚಗಳನ್ನು ಅವರ ಅಕ್ಕ-ತಂಗಿಯರು ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾವು ಖರೀದಿಸಿದ ಸ್ವತ್ತಿನಲ್ಲಿ ದೇವಾಲಯ ನಿರ್ಮಾಣದ ಪ್ರಾರಂಭವನ್ನು 2016ರಲ್ಲಿ ಮಾಡಿರುತ್ತೇವೆ. 2016ರಲ್ಲಿ

ಅಸಲು ದಾವೆಯಲ್ಲಿ 5ನೇ ಎದುರುದಾರ ತನ್ನನ್ನು ಪಾರ್ಟಿ ಮಾಡಬೇಕೆಂದು ಅರ್ಜಿ ಸಲ್ಲಿಸಿದ್ದ ಎಂದರೆ ಸರಿ. ಸದರಿ ಅರ್ಜಿಯನ್ನು ದೇಶಪಾಂಡೆ ವಕೀಲರ ಮುಖಾಂತರ ಸಲ್ಲಿಸಿದ್ದೇವು ಎಂದರೆ ಸರಿ. 2016ರಲ್ಲಿ ನಮಗೆ ಭೀಮರಾವ್ ರವರ ಸಹೋದರಿಯರು ಕೇಸ್ ಮಾಡಿದ ಬಗ್ಗೆ ಗೊತ್ತಾಯಿತು ಎಂದರೆ ಸರಿ. ದೇವಾಲಯ ನಿರ್ಮಾಣದ ಕಾಮಗಾರಿ 2022ರಲ್ಲಿ ಪೂರ್ಣಗೊಂಡಿರುತ್ತದೆ. ದೇವಾಲಯ ನಿರ್ಮಾಣಕ್ಕೆ ಪರವಾನಿಗೆ ಪಡೆದುಕೊಂಡಿಲ್ಲ. ಏಕೆಂದರೆ ಪಿಡಿಓ ರವರು ನಮಗೆ ನೀವು ಈಗಾಗಲೇ ಸಮಾದಿ ಕಟ್ಟಿರುತ್ತೀರಿ, ಅದರ ಮೇಲೆ ಗುಡಿ ಕಟ್ಟುತ್ತಿದ್ದರಿಂದ ಪರವಾನಿಗೆ ಅವಶ್ಯಕತೆ ಇರುವುದಿಲ್ಲ ಎಂದು ಹೇಳಿರುವ ಕಾರಣ, ಅನುಮತಿ ಪಡೆದಿರುವುದಿಲ್ಲ. ನಾವು ಒಕ್ಕಲುತನ ಜಮೀನನ್ನು ಖರೀದಿಸಿರುತ್ತೇವೆ ಎಂದರೆ ಸರಿ. ಸದರಿ ಜಮೀನನ್ನು ಎನ್‌ಎ ಮಾಡಿಸಿರುವುದಿಲ್ಲ. ನಾವು ಖರೀದಿಸಿದ ಜಮೀನಿನಲ್ಲಿ ದೇವಾಲಯ ಮತ್ತು ರೂಂ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಗುಡಿ ಕಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಒಂದು ವ್ಯಾಜ್ಯ ನಡೆದಾಗ ಯಾವ ಧೈರ್ಯದಿಂದ ಗುಡಿ ಕಟ್ಟಿರುತ್ತೀರಿ ಎಂದರೆ, ಸಾಕ್ಷಿ ಊರಿನ ಎಲ್ಲ ಗ್ರಾಮಸ್ಥರು ಕೋರಿಕೊಂಡ ಕಾರಣ ಹಾಗೂ ವಿರೇಶ್ ರವರ ಗುರುಗಳು ನಮ್ಮ ಊರಿನವರು ಇದ್ದ ಕಾರಣ, ಅವರು ವಿರೇಶ್ ಗುಡಿಯ ಹತ್ತಿರ ಮಾಡಬೇಕೆಂದು ಹೇಳಿದ್ದರಿಂದ ನಾವು ಕಟ್ಟಿರುತ್ತೇವೆ. ನಾವು ಮೊಂಡ ಧೈರ್ಯದಿಂದ ಯಾರು ಏನು ಬೇಕದಾರು ಮಾಡಿಕೊಳ್ಳಲಿ ಎಂಬ ಉದ್ದೇಶದಿಂದ, ನಾವು ಜಮೀನನ್ನು ಖರೀದಿಸಿರುತ್ತೇವೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಅರ್ಜಿದಾರ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**